ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಎಮ್. ಮಧುಕುಮಾರ್ ಅಲಿಯಾಸ್ ಮರಿಬಾಂಡ್ ವಿರುದ್ಧ ಕರ್ನಾಟಕ ರಾಜ್ಯ, ಕುವೆಂಪು ನಗರ ಪೊಲೀಸ್ ಠಾಣೆ, ಮೈಸೂರು

ಕ್ರಿಮಿನಲ್ ಅರ್ಜಿಸಂಖ್ಯೆ: 3374/2020, ದಿನಾಂಕ 11 ನೇ ಆಗಸ್ಟ್, 2020

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಭಾರತ ದಂಡ ಸಂಹಿತೆಯ 376 (ಡಿ), 307, 397, 120 ಬಿ ಮತ್ತು 201 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಮೈಸೂರಿನ ಕುವೆಂಪು ನಗರ ಪೊಲೀಸ್ ಠಾಣೆಯ ಅಪರಾಧಸಂಖ್ಯೆ: 38/2019 ರಿಂದ ಉದ್ಭವಿಸಿದ ಎಸ್. ಸಿ.ಸಂಖ್ಯೆ: 252 ರಲ್ಲಿನ 5 ನೇ ಆರೋಪಿಯಾಗಿ ದೋಷಾರೋಪಣೆಗೊಳಗಾದ ಅರ್ಜಿದಾರನು ಈ ಅರ್ಜಿಯನ್ನು ಸಲ್ಲಿಸಿದ್ದಾನೆ.ಆರೋಪಿಯನ್ನು ಬಂಧಿಸಿದ ದಿನಾಂಕದಿಂದ ಅವನು ನ್ಯಾಯಾಂಗ ಬಂಧನದಲ್ಲಿದ್ದಾನೆ.ಆದುದರಿಂದ, ಆರೋಪಿ ಪರ ನ್ಯಾಯವಾದಿಯು, ಅದರಲ್ಲಿ ಆಗ್ರಹಿಸಿದ ಕಾರಣಗಳಿಗಾಗಿ ನಿಯತ ಜಾಮೀನನ್ನು ಮಂಜೂರು ಮಾಡಲು ಮನವಿ ಮಾಡಿಕೊಂಡಿದ್ದಾರೆ.

2. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಲಕ ಪ್ರತಿವಾದಿ-ರಾಜ್ಯದ ಪರ ಹಾಜರಾದ ಉಚ್ಚ ನ್ಯಾಯಾಲಯದ ಸರ್ಕಾರಿ ಚ ಫೀಡರ್ ಅವರ ವಾದಗಳನ್ನು ಆಲಿಸಲಾಯಿತು.

3. ಸಿ.ಸಿ.ಸಂಖ್ಯೆ: 4507/2019 ರಲ್ಲಿ, ಆರೋಪಿಯ ವಿರುದ್ಧ ತನಿಖಾಧಿಕಾರಿಯು ಮಂಡಿಸಿದ ಆರೋಪ ಪಟ್ಟಿಯಲ್ಲಿ ತಿಳಿಸಿರುವುದೇನೆಂದರೆ, ಆರೋಪಿತ ವ್ಯಕ್ತಿಗಳ ವಿರುದ್ಧ ದೂರನ್ನು ದಾಖಲಿಸಿರುವ ಕುಮಾರಿ ನೇತ್ರಾವತಿ ಎಂಬ ಹೆಸರಿನ ಸಂತ್ರಸ್ತ ಬಾಲಕಿಯು, ಸರಸ್ವತಿಪುರಂ, 14 ನೇ ಮುಖ್ಯ ರಸ್ತೆ, ಮೈಸೂರು ಇಲ್ಲಿ ಇರುವ ಪಿ.ಬಿ. ಸಲ್ಯೂಷನ್ಸ್ ಹೆಸರಿನ ಸಾಫ್ಟ್‌ವೇರ್ ಕಚೇರಿಯಲ್ಲಿ ಕಾರನಿರ್ವಹಿಸುತ್ತಿದ್ದು, ಆರೋಪ ಪಟ್ಟಿಯಲ್ಲಿ ಸಾಕ್ಷಿದಾರನೆಂದು ತೋರಿಸಲಾಗಿರುವ ಸಿಡಬ್ಲ್ಯು .2-ಶಿವಕುಮಾರ್ ಎಂಬಾತನನ್ನು ಆಕೆಯು ಪ್ರೀತಿಸುತ್ತಿದ್ದಳು; ಅವನಿಗೆ ಕಾರ್ತಿಕ್ ಗೌಡ ಹೆಸರಿನ ಆರೋಪಿಯ ಸಂಪರ್ಕ ಬೆಳೆಯಿತು ಮತ್ತು ಆತನು ಅನುಷಾ ಹೆಸರಿನ ಮತ್ತೊಬ್ಬ ಹುಡುಗಿಯನ್ನು ತನ್ನ ಭಾವಿ ಪತ್ನಿ ಎಂದು ಪರಿಚಯಿಸಿದ್ದನು; ಅವರು ಆಗಾಗ ಪರಸ್ಪರ ಸಂದೇಶಗಳನ್ನು (ಚಾಟಿಂಗ್) ವಿನಿಮಯ ಮಾಡಿಕೊಳ್ಳುತ್ತಿದ್ದರು; ದಿನಾಂಕ: 12.04.2019 ರಂದು, ಆಕೆಯು ಗುಪ್ತ ಲಾಡ್ಜ್‌ನಲ್ಲಿ ಸ್ವಾಗತಕಾರಿಣಿಯಾಗಿ ಕೆಲಸಕ್ಕೆ ಸೇರಿಕೊಂಡಿದ್ದಳು; ಆಕೆಯು ಹಣಕಾಸಿನ ಬಿಕ್ಕಟ್ಟು ಹೊಂದಿದ್ದರಿಂದ, ಸದರಿ ಕಾರ್ತಿಕ್ ಗೌಡನಿಗೆ ಸ್ವಲ್ಪ ಹಣ ಸಾಲ ನೀಡಲು ಕೋರಿದ್ದಳು ಮತ್ತು ವಾಸ್ತವದಲ್ಲಿ ಸದರಿ ಅನುಷಾಳ ಮೂಲಕ 2,000/- ರೂ.ಗಳ ಮೊತ್ತವನ್ನು ಆಕೆಯು ಸಾಲವಾಗಿ ಪಡೆದುಕೊಂಡಿದ್ದಳು; ಸದರಿ ಕಾರ್ತಿಕ್ ಗೌಡನು ಆಗಾಗ್ಗೆ ಸದರಿ ಮೊತ್ತವನ್ನು ವಾಪಸು ನೀಡುವಂತೆ ಕೇಳಲಾರಂಭಿಸಿದನು; ಈ ಸಂದರ್ಭದಲ್ಲಿ,ದಿನಾಂಕ: 08.05.2019 ರಂದು, ಕಾರ್ತಿಕ್ ಗೌಡ ಮತ್ತು ಕು. ನೇತ್ರಾವತಿ ನಡುವೆ ಸದರಿ ಸಾಲದ ಮೊತ್ತವನ್ನು ವಾಪಸು ನೀಡುವ ಕುರಿತು ದೂರವಾಣಿ ಸಂವಾದ ನಡೆದಿತ್ತು.ಆದಾಗ್ಯೂ, ಸಿಡಬ್ಲ್ಯು .2-ಶಿವಕುಮಾರನು ಕು. ನೇತ್ರಾವತಿಯೊಂದಿಗೆ ಕಾರ್ತಿಕ್ ಗೌಡನ ಮನೆಗೆ ಹೋದಾಗ, ಆತನ ಮನೆ ಬೀಗ ಹಾಕಿರುವುದನ್ನು ಕಂಡನು; ನಂತರ ಸಂತ್ರಸ್ತ ಬಾಲಕಿ ಮತ್ತು ಸಿಬ್ಬು .2 ಇಬ್ಬರೂ ಹಿಂತಿರುಗಿ ಬರುವಾಗ, ದೂರುದಾರಳು ಮೂತ್ರ ವಿಸರ್ಜನೆ ಮಾಡಬೇಕೆಂದಿದ್ದರಿಂದ ವರ್ತುಲ ರಸ್ತೆಯ ಬಳಿ ಸಿಡಬ್ಲ್ಯು -2 ತನ್ನ ಮೋಟಾರ್ ಸೈಕಲ್ಲನ್ನು ನಿಲ್ಲಿಸಿದನು; ಆ ಸಮಯದಲ್ಲಿ, 4 ರಿಂದ 6 ವ್ಯಕ್ತಿಗಳು ಬಂದು ಸಂತ್ರಸ್ತೆ-ದೂರುದಾರಳ ಮೇಲೆ ದಾಳಿ ಮಾಡಿ, ಅತ್ಯಾಚಾರವೆಸಗಿ, ಆಕೆಯ ಮೇಲೆ ದೌರ್ಜನ್ಯವೆಸಗಿದರೆಂದು ಆರೋಪಿಸಲಾಗಿದೆ.ಇದನ್ನೇ ತನಿಖಾಧಿಕಾರಿಯು ಸಲ್ಲಿಸಿದ ಆರೋಪಪಟ್ಟಿಯಲ್ಲಿಯೂ ಹೇಳಲಾಗಿದೆ.ಈ ಎಲ್ಲಾ ಆರೋಪಗಳ ಆಧಾರದ ಮೇಲೆ, ತನಿಖಾಧಿಕಾರಿಯು ಕೂಲಂಕಷವಾಗಿ ಪ್ರಕರಣವನ್ನು ತನಿಖೆ ಮಾಡಿ, ವಶಕ್ಕೆ ಒಪ್ಪಿಸಬೇಕಾದ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಆರೋಪಿತ ವ್ಯಕ್ತಿಗಳ ವಿರುದ್ಧ ಆರೋಪ ಪಟ್ಟಿಯನ್ನು ಮಂಡಿಸಿದ್ದಾರೆ.ಈ ಅರ್ಜಿದಾರನನ್ನು ಆರೋಪಿ ಸಂಖ್ಯೆ 5 ಎಂದು ದೋಷಾರೋಪಣೆ ಮಾಡಲಾಗಿದೆ.

4. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಯು ತನ್ನ ವಾದಗಳನ್ನು ಮಂಡಿಸುವಾಗ, ಆರೋಪಿತ ಅಪರಾಧದಲ್ಲಿ ಅರ್ಜಿದಾರನು 5 ನೇ ಆರೋಪಿಯಾಗಿ ದೋಷಾರೋಪಣೆಗೊಳಗಾಗಿದ್ದು, ಅವರು ಭಾರತ ದಂಡ ಸಂಹಿತೆಯ 376 ನೇ ಮತ್ತು 397 ನೇ ಪ್ರಕರಣಗಳ ಅಡಿಯಲ್ಲಿಯೂ ಸಹ ಅಪರಾಧ ಎಸಗಿರುವನೆಂದು ಮತ್ತು ಸಿಡಬ್ಲ್ಯು .2-ಶಿವಕುಮಾರನ ಪ್ರಾಣ ತೆಗೆಯಲು ಸಹ ಪ್ರಯತ್ನಿಸಿದನೆಂದು ಆತನ ವಿರುದ್ಧ ಯಾವುದೇ ಬಹಿರಂಗ ಕೃತ್ಯವನ್ನು ಆರೋಪಿಸಿಲ್ಲವೆಂದು ವಾದಿಸಿದ್ದಾರೆ.ಈ ಆರೋಪಿಯ ವಿರುದ್ಧ ಮಾಡಿರುವ ಆರೋಪಗಳೆಂದರೆ, ಆತನು ಸಂತ್ರಸ್ತ ಬಾಲಕಿಯ ಮೇಲೆ ಲೈಂಗಿಕ ಸಂಭೋಗ ಹೊಂದುವುದಕ್ಕೆ ಪ್ರಯತ್ನಿಸುತ್ತಿದ್ದನು.ಆ ಸಮಯದಲ್ಲಿ ಅಪರಾಧ ನಡೆದ ಸ್ಥಳದ ಬಳಿ ಚಲಿಸುತ್ತಿದ್ದ ಕಾರಿನಿಂದ ಬೆಳಕು ಬಿದ್ದಿತ್ತು.ಹಾಗೆ ಬಿದ್ದ ಆ ಬೆಳಕಿನಲ್ಲಿ ನೋಡಿ ಈ ಆರೋಪಿಯು ಸಹ, ಸಂತ್ರಸ್ತ ಬಾಲಕಿಯೊಂದಿಗೆ ಲೈಂಗಿಕ ಸಂಭೋಗ ಹೊಂದುವ ಪ್ರಯತ್ನ ಮಾಡಿದ್ದನೆಂದು ಸಹ ಆರೋಪಿಸಲಾಗಿದೆ.ತನಿಖಾಧಿಕಾರಿಯು ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಮಾಡಿರುವ ಈ ಆರೋಪವನ್ನು ಹೊರತುಪಡಿಸಿ, ಆರೋಪ ಪಟ್ಟಿಯಲ್ಲಿ ಪ್ರಯಾಸದಿಂದ ಸೇರಿಸಿರುವ ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಆರೋಪಿಯ ವಿರುದ್ಧ ಮತ್ತಾವುದೇ ಆರೋಪವನ್ನು ಮಾಡಿರುವುದಿಲ್ಲ.ಈ ಆರೋಪಿಯು ಬಂಧನಕ್ಕೊಳಗಾದ ದಿನಾಂಕದಿಂದಲೂ ನ್ಯಾಯಾಂಗ ಬಂಧನದಲ್ಲಿದ್ದನು.ಇದಲ್ಲದೆ, ಆರೋಪಿತ ಅಪರಾಧಗಳನ್ನು ಎಸಗುವಲ್ಲಿ ಈ ಆರೋಪಿಯ ವಿರುದ್ಧ ಯಾವುದೇ ನಿರ್ದಿಷ್ಟ ದೋಷಾರೋಪಣಾ ಸಾಕ್ಷ್ಯವಿರುವುದಿಲ್ಲ ಹಾಗೂ ಈ ಆರೋಪಿಯ ವಶದಿಂದ ಯಾವುದೇ ದೋಷಾರೋಪಣಾ ಸಾಕ್ಷ್ಯಗಳನ್ನು ಜಪ್ತಿ ಮಾಡಿರುವುದಿಲ್ಲ.ಈ ಆರೋಪಿಗೆ ಜಾಮೀನು ನೀಡುವಾಗ, ಈ ನ್ಯಾಯಾಲಯವು ವಿಧಿಸುವ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸಲು ಈತನು ಸಿದ್ಧನಿರುವನು.ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಯು ಈ ಎಲ್ಲ ವಾದಗಳನ್ನು ಮಾಡಿ, ನಿಯತ ಜಾಮೀನು ಮಂಜೂರು ಮಾಡುವಂತೆ ಕೋರಿದ್ದಾರೆ.

5. ಇದಕ್ಕೆ ತದ್ವಿರುದ್ಧವಾಗಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಚ ಫೀಡರ್ ಅವರು, ದೂರಿನಲ್ಲಿ ಸಲ್ಲಿಸಿದ ಹೇಳಿಕೆಗಳ ಕಡೆಗೆ, ಹಾಗೆಯೇ ಅಪರಾಧಸಂಖ್ಯೆ: 38/2019 ರಲ್ಲಿ ಆರೋಪಿಯ ವಿರುದ್ಧ ಮಾಡಿದ ಆರೋಪಗಳ ಕಡೆಗೆ ನನ್ನ ಗಮನ ಸೆಳೆದಿದ್ದಾರೆ.ಆದರೆ, ಅತ್ಯಾಚಾರದ ಅಪರಾಧದಲ್ಲಿ ಸಂತ್ರಸ್ತ ಬಾಲಕಿಯೆಂದು ಹೇಳಲಾಗಿರುವ ದೂರುದಾರಳು, ಅರ್ಜಿದಾರನು/ 5 ನೇ ಆರೋಪಿಯು, ಸಾಕ್ಷಿದಾರನೆಂದು ತೋರಿಸಲಾಗಿರುವ ಸಿಡಬ್ಲ್ಯು .2-ಶಿವಕುಮಾರನ ಪ್ರಾಣ ತೆಗೆಯುವ ಪ್ರಯತ್ನ ಮಾಡಿದನು ಮತ್ತು ಈ ಸಿಡಬ್ಲ್ಯು . 2-ಶಿವಕುಮಾರನಿಗೆ ಒದ್ದನು ಎಂದು ಹೇಳಿಕೆ ನೀಡಿದ್ದಾಳೆ.ಇದನ್ನು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳಲ್ಲಿ ಸಹ ಬಹಿರಂಗಪಡಿಸಲಾಗಿದೆ.ಸಂತ್ರಸ್ತೆಯ ಹೇಳಿಕೆಯನ್ನು ಹಾಗೆಯೇ, ಸಿಡಬ್ಲ್ಯು .2 ಈತನ ಹೇಳಿಕೆಯನ್ನು ಅವಲೋಕಿಸಲಾಗಿ, ಆರೋಪಿಸಲಾದ ಅಪರಾಧಗಳನ್ನು ಎಸಗುವಲ್ಲಿ ಇತರ ಆರೋಪಿತ ವ್ಯಕ್ತಿಗಳೊಂದಿಗೆ ಈ ಆರೋಪಿಯು ಸಹ ಅಪರಾಧದಲ್ಲಿ ಭಾಗಿಯಾಗಿದ್ದನು ಎಂದು ಆರೋಪಿಸಲಾಗಿದೆ.ದೂರಿನ ಕರ್ತೃವಾಗಿರುವ ಸಂತ್ರಸ್ತ ಬಾಲಕಿಯೊಂದಿಗೆ ಅಪರಾಧ ನಡೆದ ಸ್ಥಳದಲ್ಲಿ ಸಿಡಬ್ಲ್ಯು .2 ಇದ್ದನು ಮತ್ತು 2 ನೇ ಆರೋಪಿಯು, ಸಿಡಬ್ಲ್ಯು .2 ನಿಗೆ ದೊಣ್ಣೆಯಿಂದ ಈತನ ಮುಖ ಹಾಗೂ ದೇಹದ ಇತರ ಭಾಗಗಳ ಮೇಲೆ ಸಹ ಹಲ್ಲೆ ಮಾಡಿದ್ದನು ಮತ್ತು 3 ನೇ ಆರೋಪಿಯು ಸಹ ಸಿಡಬ್ಲ್ಯು .2 ನ ಮೇಲೆ ಹಲ್ಲೆ ಮಾಡಿದ್ದನು.4 ರಿಂದ 6 ರವರೆಗಿನ ಆರೋಪಿಗಳು ಸಿಡಬ್ಲ್ಯು- 1-ಸಂತ್ರಸ್ತ ಬಾಲಕಿಯನ್ನು ಎಳೆದಾಡಿ, ಆಕೆಯ ಮೇಲೆ ಅತ್ಯಾಚಾರವೆಸಗಿದ್ದಾರೆ.ಈ ಅರ್ಜಿದಾರನು ಸಹ ಹೇಯ ಅಪರಾಧದಲ್ಲಿ ಭಾಗಿಯಾಗಿರುವುದರಿಂದ, ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ, ಖಂಡಿತವಾಗಿಯೂ, ಪ್ರಾಸಿಕ್ಯೂಷನ್ ಮೊಕದ್ದಮೆಯ ದಾರಿಗೆ ಅಡ್ಡ ಬಂದು ಸಾಕ್ಷ್ಯಗಳನ್ನು ನಾಶಪಡಿಸುವನು.ಇವು, ರಾಜ್ಯದ ಪರ ಮಾನ್ಯ ಉಚ್ಚ ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರು ಜಾಮೀನು ಅರ್ಜಿಯನ್ನು ವಜಾಗೊಳಿಸಲು ಕೋರಿ ಮಾಡಿದ ವಾದಗಳಾಗಿವೆ.

6. ಈ ಸಂದರ್ಭದ ಹಿನ್ನೆಲೆಯಲ್ಲಿ, ಮೇಲೆ ಹೇಳಿದ ಅಪರಾಧಗಳ ಸಂಬಂಧದಲ್ಲಿ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯ ಅಪರಾಧಸಂಖ್ಯೆ: 38/2019 ರಿಂದ ಉದ್ಭವಿಸಿದ ಸಿ.ಸಿ.ಸಂಖ್ಯೆ: 4507/2019 ರಲ್ಲಿ, ಆರೋಪಿತ ವ್ಯಕ್ತಿಗಳ ವಿರುದ್ಧ ಆರೋಪ ಪಟ್ಟಿಯನ್ನು ಮಂಡಿಸುವ ಸಲುವಾಗಿ ತನಿಖಾವಧಿಯಲ್ಲಿ ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯಗಳನ್ನು ಉಲ್ಲೇಖಿಸಿ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಯು ತಮ್ಮ ವಾದಗಳನ್ನು, ಹಾಗೇಯೇ, ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರು ತಮ್ಮ ಪ್ರತಿವಾದವನ್ನು ಮಂಡಿಸಿದ್ದಾರೆ. ಆದಾಗ್ಯೂ, ದೂರಿನ ಕರ್ತೃವಾಗಿರುವ ಸಂತ್ರಸ್ತೆ, ಹಾಗೆಯೇ ಸಿಡಬ್ಲ್ಯು .2-ಶಿವಕುಮಾರನು ನೀಡಿದ ಹೇಳಿಕೆಗಳನ್ನು ಪರಿಶೀಲಿಸುವುದು ಸಹ ಸುಸಂಗತವಾಗಿದೆ.ಅವರ ಹೇಳಿಕೆಗಳ ಪ್ರಕಾರ, ಸಂತ್ರಸ್ತ ಬಾಲಕಿಯು ಸಿಡಬ್ಲ್ಯು .2 ನ್ನು ಪ್ರೀತಿಸುತ್ತಿದ್ದಳು ಮತ್ತು ಸಿಡಬ್ಲ್ಯು . 2 ಆರೋಪಿಗಳ ಪೈಕಿ ಒಬ್ಬನಾದ ಕಾರ್ತಿಕ್

ಗೌಡನ ಸಂಪರ್ಕದಲ್ಲಿದ್ದನು.ಸಂತ್ರಸ್ತ ಬಾಲಕಿಗೆ ಹಣಕಾಸಿನ ನೆರವಿನ ಅಗತ್ಯವಿತ್ತಾದ್ದರಿಂದ, ಮತ್ತೊಬ್ಬ ಬಾಲಕಿ ಅನುಷಾಳನ್ನು ಪರಿಚಯಿಸಲಾಗಿತ್ತು; ಆ ನಂತರ ಆಕೆಯು 2,000/- ರೂ.ಗಳ ಮೊತ್ತವನ್ನು ಸಾಲವಾಗಿ ತೆಗೆದುಕೊಂಡಿದ್ದಳು; ಮೇಲೆ ಹೇಳಿದ ಬಾಲಕಿಯಿಂದ ಸಾಲವನ್ನು ಪಡೆದುಕೊಂಡ ತರುವಾಯ, ಆರೋಪಿ ಕಾರ್ತಿಕ್ ಗೌಡನು ಸದರಿ ಸಾಲದ ಮೊತ್ತವನ್ನು ಹಿಂತಿರುಗಿಸಲು ಆಕೆಯನ್ನು ಒತ್ತಾಯಿಸಿದ; ಸಂತ್ರಸ್ತ ಬಾಲಕಿ ಮತ್ತು ಆರೋಪಿ ಕಾರ್ತಿಕ್ ಗೌಡ ಈರ್ವರ ನಡುವೆ ದೂರವಾಣಿ ಮೂಲಕ ಸ್ವಲ್ಪಮಟ್ಟಿನ ಮಾತುಕತೆಯೂ ನಡೆದಿತ್ತು; ಆ ತರುವಾಯ, ಸಂತ್ರಸ್ತ ಬಾಲಕಿ ಮತ್ತು ಸಿಡಬ್ಲ್ಯು .2-ಶಿವಕುಮಾರ ಈರ್ವರೂ ಕಾರ್ತಿಕ್ ಗೌಡನ ಮನೆಗೆ ಹೋಗಿದ್ದರಾದರೂ, ಆತನ ಮನೆಯ ಬಾಗಿಲಿಗೆ ಬೀಗ ಹಾಕಿರುವುದನ್ನು ಕಂಡರು; ತರುವಾಯ, ಸಿಡಬ್ಲ್ಯು .1-ನೇತ್ರಾವತಿ ಮತ್ತು ಸಿಡಬ್ಲ್ಯು .2 ಇಬ್ಬರೂ ಹಿಂತಿರುಗುತ್ತಿರುವಾಗ, ದೂರುದಾರಳು ಮೂತ್ರ ವಿಸರ್ಜನೆಗೆ ಹೋಗಲು ಉದ್ದೇಶಿಸಿದ್ದರಿಂದ, ದಾರಿಯಲ್ಲಿ ವರ್ತುಲ ರಸ್ತೆಯ ಬಳಿ ಸಿಡಬ್ಲ್ಯು .2 ಮೋಟಾರ್ ಸೈಕಲ್‌ಅನ್ನು ನಿಲ್ಲಿಸಿದ; ಆ ಸಮಯದಲ್ಲಿ, 4 ರಿಂದ 6 ಜನರು ಬಂದು ಸಂತ್ರಸ್ತೆ ದೂರುದಾರಳ ಮೇಲೆ ಹಲ್ಲೆ ಮಾಡಿ, ಅತ್ಯಾಚಾರವೆಸಗಿ, ಆಕೆಯ ಮೇಲೆ ದೌರ್ಜನ್ಯವೆಸಗಿದ್ದಾರೆ ಎಂಬುದು ತಿಳಿದುಬರುತ್ತದೆ.

7. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದಗಳನ್ನು ಮಂಡಿಸುವಾಗ, ಕುವೆಂಪುನಗರ ಪೊಲೀಸ್ ಠಾಣೆಯ ಅಪರಾಧಸಂಖ್ಯೆ: 38/2019 ರಲ್ಲಿ ಆರೋಪಿತ ವ್ಯಕ್ತಿಗಳಾಗಿರುವ ಕಾರ್ತಿಕ್ ಕುಮಾರನ ಸಂಬಂಧದಲ್ಲಿದಿನಾಂಕ: 06.11.2019 ರ ಕ್ರಿಮಿನಲ್ ಅರ್ಜಿಸಂಖ್ಯೆ: 7404/2019 ರಲ್ಲಿ, ಸೂರ ಕುಮಾರ್ ಅಲಿಯಾಸ್ ಸೂರನ ಸಂಬಂಧದಲ್ಲಿದಿನಾಂಕ: 03.12.2019 ರ ಕ್ರಿಮಿನಲ್ ಅರ್ಜಿಸಂಖ್ಯೆ: 7915/2019 ರಲ್ಲಿ, ಜೀವನ್ ಕುಮಾರನ ಸಂಬಂಧದಲ್ಲಿ ದಿನಾಂಕ:19.12.2019 ರ ಕ್ರಿಮಿನಲ್ ಅರ್ಜಿಸಂಖ್ಯೆ: 8411/2019 ರಲ್ಲಿ, ದಿಲೀಪ್ ಕೆ. ಸಂಬಂಧದಲ್ಲಿದಿನಾಂಕ: 27.11.2019 ರಲ್ಲಿ, ಈ ನ್ಯಾಯಾಲಯದ ಸಮನ್ವಯ ಪೀಠವು ಹೊರಡಿಸಿದ ಆದೇಶಗಳ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.ಈ ಎಲ್ಲ ಆರೋಪಿತ ವ್ಯಕ್ತಿಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸಿ, ಮೇಲೆ ಹೇಳಿದ ಕ್ರಿಮಿನಲ್ ಅರ್ಜಿಗಳಲ್ಲಿ ಈ ನ್ಯಾಯಾಲಯವು ನೀಡಿದ ಜಾಮೀನಿನ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ.ಆದರೆ, 5 ನೇ ಆರೋಪಿಯಾಗಿ ದೋಷಾರೋಪಣೆಗೆ ಒಳಗಾಗಿರುವ ಈ ಆರೋಪಿಯು ಸಹ ಆರೋಪಿತ ಅಪರಾಧಗಳಿಗೆ ಸಂಬಂಧಿಸಿದಂತೆ ಅಂಥಹುವೇ ಪರಿಸ್ಥಿತಿಯಲ್ಲಿದ್ದಾನೆ.ಈ ಆರೋಪಿಯು ಸಹ ಸಿಡಬ್ಲ್ಯು 2-ಶಿವಕುಮಾರನನ್ನು ಒದ್ದು ಆರೋಪಿತ ಅಪರಾಧದಲ್ಲಿ ಇತರ ಆರೋಪಿಗಳೊಂದಿಗೆ ಭಾಗಿಯಾಗಿದ್ದಾನೆಂದು ಹೇಳಲಾಗಿದೆ.ಆ ತರುವಾಯ, 4 ರಿಂದ 6 ರವರೆಗಿನ ಆರೋಪಿಗಳು, ಸಿಡಬ್ಲ್ಯು .1-ಕು.ನೇತ್ರಾವತಿಯನ್ನು ಎಳೆದಾಡಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆಂದು ಹೇಳಲಾಗಿದೆ.ಆದರೆ, ಅಪರಾಧ ನಡೆದ ಸ್ಥಳದಲ್ಲಿ ಹತ್ತಿರದಿಂದ ಹಾದುಹೋದ ಕಾರಿನ ಬೆಳಕು ಬಿದ್ದಿತು, ಆ ಬೆಳಕು ಬಿದ್ದಿದ್ದನ್ನು ಕಂಡು, ಈ ಅರ್ಜಿದಾರನು ಲೈಂಗಿಕ ಸಂಭೋಗ ನಡೆಸುವ ಪ್ರಯತ್ನ ನಡೆಸಿದನಾದರೂ, ಆರೋಪಿತ ಅಪರಾಧವನ್ನು ಎಸಗಲಿಲ್ಲ.ಆದರೆ, ಸಿಡಬ್ಲ್ಯು .2-ಶಿವಕುಮಾರನಿಗೆ ಹೊಡೆತದ ಗಾಯಗಳುಂಟಾಗಿವೆ.ಆತನಿಗುಂಟಾದ ಸದರಿ ಗಾಯಗಳು ಸಾಧಾರಣ ಸ್ವರೂಪದವುಗಳಾಗಿದ್ದು, ಒಂದು ತೀವ್ರ ಗಾಯವಾಗಿದೆ.ಆದಾಗ್ಯೂ, ಚಿಕಿತ್ಸೆ ಪಡೆದ ನಂತರ ಸಿಡಬ್ಲ್ಯು .2-ಶಿವಕುಮಾರನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.ಆತನ ಪ್ರಾಣಕ್ಕೆ ಯಾವುದೇ ಆತಂಕವಿಲ್ಲ.ಆದರೆ, ಮೇಲೆ ಹೇಳಿದ ಸಹ-ಆರೋಪಿಗಳು ಹಾಗೂ ಅರ್ಜಿದಾರ/ 5 ನೇ ಆರೋಪಿಯೂ ಸಹ ಒಂದೇ ರೀತಿಯ ದೋಷಾರೋಪಣೆಗೆ ಒಳಗಾಗಿದ್ದಾರೆ.ಆದುದರಿಂದ, ಆರೋಪಿಗೆ ಜಾಮೀನು ನೀಡುವಾಗ, ಆರೋಪಿಯು ವಿಚಾರಣೆಯನ್ನು ಎದುರಿಸಲು ಲಭ್ಯವಿರುವನೇ, ಆರೋಪಿಯ ಬಗ್ಗೆ ಯಾವುದೇ ಕೆಟ್ಟ ಪೂರ್ವೇತಿಹಾಸವಿದೆಯೇ, ಹಾಗೆಯೇ, ಆರೋಪಿಯು ನ್ಯಾಯದಿಂದ ತಪ್ಪಿಸಿಕೊಳ್ಳುವ ಸಂಭವವಿದೆಯೇ ಮತ್ತು ಆತನ ವಿರುದ್ಧ ದಾಖಲಿಸಿದ ಆರೋಪ ಪಟ್ಟಿಯು ಸಿದ್ಧಗೊಂಡ ಪ್ರಕರಣದ ತನಿಖೆಯ ಪ್ರಗತಿಗೆ ಹಿನ್ನಡೆಯುಂಟು ಮಾಡುವನೇ ಹಾಗೂ ಪ್ರಾಸಿಕ್ಯೂಷನ್ ಪರವಾಗಿರುವ ಸಾಕ್ಷಿದಾರರಿಗೆ ಬೆದರಿಸುತ್ತಿರುವನೇ ಎಂಬ ಸಂಗತಿಗಳನ್ನು ಪ್ರಮುಖವಾಗಿ ಪರಿಗಣಿಸಬೇಕಾಗಿದೆ ಎಂದು ಹೇಳಲಾಗಿದೆ.ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ, ತನಿಖಾಧಿಕಾರಿಯು ಈಗಾಗಲೇ ಅರ್ಜಿದಾರನ/ಆರೋಪಿಯ ವಿರುದ್ಧ ಆರೋಪ ಪಟ್ಟಿಯನ್ನು ಮಂಡಿಸಿದ್ದಾರೆ.ಸಹ-ಆರೋಪಿಗಳಿಗೆ ಮೇಲೆ ಹೇಳಿದಂತೆ ಈಗಾಗಲೇ ಜಾಮೀನನ್ನು ಸಹ ನೀಡಲಾಗಿದೆ.ಆದುದರಿಂದ, ಈ ಜಾಮೀನು ಅರ್ಜಿಯ ಪರಿಗಣನೆಗಾಗಿ, ಸವಿವರವಾದ ದಸ್ತಾವೇಜೀಕರಣದ ಅಗತ್ಯವಿಲ್ಲ, ಅದೂ ಅಲ್ಲದೆ, ಈ ಹಂತದಲ್ಲಿ, ಆರೋಪಿಯ ವಿರುದ್ಧ ಆರೋಪ ಪಟ್ಟಿಯನ್ನು ಮಂಡಿಸುವ ಸಲುವಾಗಿ ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯಗಳ ಯಾವುದೇ ಸವಿವರ ಚರ್ಚೆಯ ಅಗತ್ಯವಿಲ್ಲ.ಸಾಕ್ಷಿದಾರರ ಹೇಳಿಕೆಯನ್ನು ಒಳಗೊಂಡ ಇಡೀ ಆರೋಪ ಪಟ್ಟಿಯ, ಹಾಗೆಯೇ, ಪಂಚರ ಸಮ್ಮುಖದಲ್ಲಿ ತನಿಖಾಧಿಕಾರಿಯು ಬರೆದಿರುವರೆಂದು ಹೇಳಲಾಗಿರುವ ಮಹಜರ್, ಹಾಗೆಯೇ, ಘಟನೆಗೆ

ಸಂಬಂಧಿಸಿದಂತೆ ಈ ಆರೋಪಿಯ ವಿರುದ್ಧ ಮಾಡಿದ ಆರೋಪಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದ ನಂತರ, ಈ ಹಂತದಲ್ಲಿ, ಆರೋಪ ಪಟ್ಟಿಯು ಸಿದ್ಧಗೊಂಡ ಪ್ರಕರಣದಲ್ಲಿ ಪ್ರತಿಯೊಬ್ಬ ಆರೋಪಿಯ ಪಾತ್ರಕ್ಕೆ ಸಂಬಂಧಿಸಿದಂತೆ ವಿವರವಾಗಿ ತಿಳಿಸಲಾಗುವುದಿಲ್ಲ ಮತ್ತು ಆರೋಪಿಯು ವಿಚಾರಣೆಯನ್ನು ಎದುರಿಸುವ ಅಗತ್ಯವಿದೆ.ಆದುದರಿಂದ, ಜಾಮೀನಿನ ಪರಿಹಾರ ಕೋರಿ ಅರ್ಜಿದಾರರ ಪರ ನ್ಯಾಯವಾದಿಗಳ ವಾದದಲ್ಲಿ ಹುರುಳಿದೆ.ಆರೋಪಿಯ ವಿರುದ್ಧ ಮಂಡಿಸಲಾದ ಆರೋಪ ಪಟ್ಟಿಗೆ ಸಂಬಂಧಿಸಿದ ಸಂಪೂರ್ಣ ಸಾಕ್ಷ್ಯಗಳ ಸ್ಥೂಲ ಅವಲೋಕನದಿಂದ, ಆರೋಪಿಯು ಸಲ್ಲಿಸಿದ ಜಾಮೀನು ಅರ್ಜಿಯ ಪರಿಗಣನೆಗೆ ಸವಿವರವಾದ ದಸ್ತಾವೇಜೀಕರಣದ ಅಗತ್ಯವಿಲ್ಲವೆಂದು ಹೇಳಲಾಗಿದೆ.

8. ಆದಾಗ್ಯೂ, ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಚ ಫೀಡರ್ ಅವರು, ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇ ಆದರೆ, ಖಂಡಿತವಾಗಿಯೂ ಆತನು ಪ್ರಾಸಿಕ್ಯೂಷನ್ ಮೊಕದ್ದಮೆಯ ಹಾದಿಗೆ ಅಡ್ಡ ಬಂದು, ಸಾಕ್ಷ್ಯವನ್ನು ನಾಶಪಡಿಸುವನು.ಪ್ರಾಸಿಕ್ಯೂಷನ್ ಹಿತಾಸಕ್ತಿಯನ್ನು ಕಾಪಾಡಲು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ, ಈ ಆತಂಕವನ್ನು ಕಡಿಮೆ ಮಾಡಬಹುದು.ಆದುದರಿಂದ, ಮೇಲೆ ಹೇಳಿದ ಕಾರಣಗಳಿಗಾಗಿ, ಹಾಗೂ, ಮೊಕದ್ದಮೆಯ ಸಂದರ್ಭಗಳ ಹಿನ್ನೆಲೆಯಲ್ಲಿ, ಆರೋಪಿಯು ಜಾಮೀನಿಗೆ ಅರ್ಹನಾಗಿರುವನು ಎಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತೇನೆ:

ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ 439 ನೇ ಪ್ರಕರಣದ ಮೇರೆಗೆ ಅರ್ಜಿದಾರನು/ 5 ನೇ ಆರೋಪಿಯು ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.ಆತನನ್ನು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು:

1) ಅರ್ಜಿದಾರನು/ 5 ನೇ ಆರೋಪಿಯು, ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯ ಅಪರಾಧಸಂಖ್ಯೆ: 38/2019 ರಿಂದ ಉದ್ಭವಿಸಿದ ಎಸ್.ಸಿ.ಸಂಖ್ಯೆ: 252/2019 ರಲ್ಲಿ, ಅಧಿ ವಿಚಾರಣಾ ನ್ಯಾಯಾಲಯಕ್ಕೆ ಕ ಸಮಾಧಾನವಾಗುವ ಂ ಥ 50,000/- ರೂ.ಗಳ ಭದ್ರತೆಯೊಂದಿಗೆ ಅದೇ ಮೊತ್ತಕ್ಕೆ ಬಾಂಡ್ ಬರೆದು ಕೊಡತಕ್ಕದ್ದು;

11) ಅರ್ಜಿದಾರನು/ 5 ನೇ ಆರೋಪಿಯು, ಸುನಾವಣೆ ನಡೆಯುವ ಎಲ್ಲಾ ದಿನಗಳಂದು ನ್ಯಾಯಾಲಯದ ಮುಂದೆ ಹಾಜರಾಗತಕ್ಕದ್ದು;

iii) ಅರ್ಜಿದಾರನು/ 5 ನೇ ಆರೋಪಿಯು, ಇನ್ನು ಮುಂದೆ ಯಾವುದೇ ಅಪರಾಧಿಕ ಕಾರಚಟುವಟಿಕೆಗಳಲ್ಲಿ ತೊಡಗಿಕೊಳ್ಳತಕ್ಕದ್ದಲ್ಲ;

iv) ಅರ್ಜಿದಾರನು/ 5 ನೇ ಆರೋಪಿಯು, ಪ್ರಾಸಿಕ್ಯೂಷನ್ ಸಾಕ್ಷಿದಾರರ ಪ್ರಕರಣವನ್ನು ಹಾಳು ಮಾಡತಕ್ಕದ್ದಲ್ಲ ಅಥವಾ ಅದಕ್ಕೆ ಅಡ್ಡಿಪಡಿಸತಕ್ಕದ್ದಲ್ಲ

V) ಅರ್ಜಿದಾರನು/ 5 ನೇ ಆರೋಪಿಯು, ಸಕ್ಷಮ ನ್ಯಾಯಾಲಯದಿಂದ ಪೂರ್ವಾನುಮತಿ ಪಡೆಯದೆ ಮೈಸೂರು ಜಿಲ್ಲೆಯ ಅಧಿಕಾರ ವ್ಯಾಪ್ತಿಯನ್ನು ಬಿಟ್ಟು ಹೊರಹೋಗತಕ್ಕದ್ದಲ್ಲ;

ಅರ್ಜಿದಾರನು/ 5 ನೇ ಆರೋಪಿಯು, ಮೇಲೆ ಹೇಳಿದ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ, ಜಾಮೀನು ಆದೇಶವು ಸ್ವಯಂ ಆಗಿ ಕೊನೆಗೊಳ್ಳತಕ್ಕದ್ದು.